ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 534
ಸದಸ್ಯರ ಹೆಸರು : ಶ್ರೀ ಬಿ. ಎಂ. ಫಾರೂಖ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : ದಿನಾಂಕ:21.02.2022
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ಕಳೆದ ಎರಡು ವರ್ಷಗಳಿಂದ 3 ಅಲೆಗಳಲ್ಲಿ ಬಂದ ಕೋವಿಡ್‌ನಿಂದಾಗಿ ಶಾಲಾ ಕಾಲೇಜುಗಳು ಸರಿಯಾಗಿ ಕಾರ್ಯ ನಿರ್ವಹಿಸದಿರುವ ಹಿನ್ನೆಲೆಯಲ್ಲಿ ಮಕ್ಕಳಿಗೆ ಸಮರ್ಪಕವಾಗಿ ಪಾಠ ಬೋಧನೆಯಾಗದೆ ಶೈಕ್ಷಣಿಕ ಅಭಿವೃದ್ಧಿ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ.	ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳಾವುವು? (ವಿವರ ನೀಡುವುದು)	ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳು ಈ ಕೆಳಗಿನಂತಿವೆ. ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ ಡಿಎಸ್‌ಇಆರ್‌ಟಿ ವತಿಯಿಂದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. • **ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ಓದು ಕರ್ನಾಟಕ:** ವಿದ್ಯಾರ್ಥಿಗಳ ಪ್ರಥಮ ಭಾಷೆ (ಕನ್ನಡ/ಉರ್ದು/ಮರಾಠಿ) ಮತ್ತು ಗಣಿತ ವಿಷಯಗಳಲ್ಲಿನ ಕಲಿಕಾ ಮಟ್ಟವನ್ನು ತಿಳಿದುಕೊಂಡು ಅವರ ಕಲಿಕಾ ಮಟ್ಟಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳ ಗುಂಪುಗಳನ್ನು ರಚಿಸಿ ಚಟುವಟಿಕೆಗಳನ್ನು ಅಯೋಜಿಸುವುದರ ಮೂಲಕ ಮುಂದಿನ ಕಲಿಕಾ ಹಂತಕ್ಕೆಕರೆದುಕೊಂಡು ಹೋಗಲಾಗುವುದು. 'ಗರಿಷ್ಠ ಮಟ್ಟದ ಕಲಿಕೆಗಾಗಿ ಸಂಯೋಜಿತ ಚಟುವಟಿಕೆ' ಗಳನ್ನು (Combined Activities for Maximized Learning-CAML) ಆಯೋಜಿಸಿ 'ಸೂಕ್ತ ಮಟ್ಟಕ್ಕೆಅನುಗುಣವಾಗಿ ಬೋಧನೆ' ಯನ್ನು (Teaching at the Right Level-TARL) ನೀಡಲು ಬೋಧನಾ-ಕಲಿಕಾ ಸಾಮಗ್ರಿಗಳನ್ನೊಳಗೊಂಡ ಕಲಿಕಾ ಕಿಟ್‌ಅನ್ನು ಬಳಸಲಾಗುತ್ತಿದೆ. • **ಪ್ರತಿಭೆ ಆಧಾರಿತ ಪ್ರೇರಕ ಚಟುವಟಿಕೆ ಕಾರ್ಯಕ್ರಮ:** "ಪ್ರೇರಣಾ" ಕಾರ್ಯಕ್ರಮವು ಮಗುವಿನ ಗುಣಾತ್ಮಕ ಕಲಿಕೆಗೆ ಒತ್ತು ನೀಡುತ್ತಿದ್ದುರಚನಾತ್ಮಕ ಕಲಿಕೆ ಹಾಗೂ ನಿರಂತರಅಭ್ಯಾಸದ ಮೂಲಕ ಮಕ್ಕಳ ಕಲಿಕೆಯಲ್ಲಿ ಪ್ರೇರಣೆಯನ್ನುಂಟು ಮಾಡುವುದಾಗಿದೆ. "ಪ್ರೇರಣಾ" ಕಾರ್ಯಕ್ರಮವು 4 ಪ್ರಮುಖ ವಿಭಾಗಗಳಲ್ಲಿ ರೂಪಿಸಲಾಗಿದೆ. 1) ಶಿಕ್ಷಣ ಸ್ಟಾರ್ 2) ಸ್ಟೂಡೆಂಟ್‌ಕ್ಲಬ್ ಹಾಗೂ ಸಹಪಾಠಿ ಕಲಿಕೆ 3)

			ಅಭ್ಯಾಸ ಪುಸ್ತಕಗಳು 4) ಸಚಿತ್ರ ಪ್ರಗತಿ ಪತ್ರ.ಈ ಕಾರ್ಯಕ್ರಮದ ಮೂಲಕ ಪ್ರತಿ ಶಾಲೆಯಲ್ಲಿ ಮಕ್ಕಳ ಹಾಜರಾತಿಯಲ್ಲಿಏರಿಕೆ, ಕಲಿಕೆಯಲ್ಲಿಉತ್ಸಾಹ ಹಾಗೂ ಮಕ್ಕಳಿಗೆ ಅಭ್ಯಾಸ ಪುಸ್ತಕಗಳು ದೊರೆಯುವುದರಿಂದ ಮಕ್ಕಳ ಗುಣಾತ್ಮಕ ಶಿಕ್ಷಣವು ಹೆಚ್ಚುತ್ತದೆ. • **ವಿಜ್ಞಾನ ಕೇಂದ್ರಗಳು:** ವಿಜ್ಞಾನ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು, ಪೂರಕ ಶಿಕ್ಷಣ ಹಾಗೂ ಉತ್ತಮವಾದ ಕಲಿಕಾ ಬೋಧನಾ ವಿಧಾನವನ್ನು ನೀಡಲು, ಅಗತ್ಯವಾಗಿರುವುದು. ಈ ಗುರಿಗಳ ಆಧಾರದ ಮೇಲೆ ವಿದ್ಯಾರ್ಥಿಗಳು ಸ್ವತಃ ಪ್ರಯೋಗಗಳನ್ನು ಮಾಡಿ ಅನುಭವ, ಜ್ಞಾನವನ್ನು ಮತ್ತು ಶಿಕ್ಷಕರು ಬೋಧನಾ ವಿಧಾನವನ್ನು ಉತ್ತಮ ಪಡಿಸಿಕೊಳ್ಳಲು ಅಗಸ್ತ್ಯ ಫೌಂಡೇಶನ್‌ನ ಸಹ-ಭಾಗಿತ್ವದಲ್ಲಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಿ ಅದರ ನಿರ್ವಹಣೆಯನ್ನು ಮಾಡಲಾಗುತ್ತಿದೆ. • 2020-21ನೇ ಸಾಲಿನಲ್ಲಿ ಕೋವಿಡ್ -19 ಸಾಂಕ್ರಾಮಿಕ ರೋಗದ ಪ್ರಯುಕ್ತ ಶಾಲೆಗಳು ಪ್ರಾರಂಭ ಮಾಡಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ 1ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ರೇಡಿಯೋ ಹಾಗೂ ದೂರದರ್ಶನ ಚಂದನ ವಾಹಿನಿಯಲ್ಲಿ ಸಂವೇದ ಕಾರ್ಯಕ್ರಮದ ಮೂಲಕ ಎಲ್ಲಾ ವಿಷಯದ ಪಾಠಗಳನ್ನು ನುರಿತ ಶಿಕ್ಷಕರಿಂದ ಪ್ರಸಾರ ಮಾಡಲಾಗಿದೆ. ಆಕಾಶವಾಣಿ ರೇಡಿಯೋ ಕಾರ್ಯಕ್ರಮದಲ್ಲಿ ಬೆಳಿಗ್ಗೆ 10.00 ರಿಂದ 10.15 ರವರಗೆ 1 ಮತ್ತು 2ನೇ ತರಗತಿ ವಿದ್ಯಾರ್ಥಿಗಳಿಗೆ ಮತ್ತು 10.15 ರಿಂದ 10.30ರವರಗೆ 3 ಮತ್ತು 4ನೆ ತರಗತಿ ವಿದ್ಯಾರ್ಥಿಗಳಿಗೆ ಡಿ.ಎಸ್.ಇ.ಆರ್.ಟಿ.ರವರು ತಯಾರಿಸಿದ ಆಡಿಯೋ ಪಾಠಗಳನ್ನು ಪ್ರಸಾರ ಮಾಡಲಾಗಿದೆ. ಇದೇ ಪಾಠಗಳನ್ನು ರಾಜ್ಯದ ಎಫ್.ಎಂ. ರೇನ್‌ಬೋ ಚಾನಲ್ ನಲ್ಲಿ ಮರುಪ್ರಸಾರ ಮಾಡಲಾಗಿದೆ. • ದೀಕ್ಷಾ ಪೋರ್ಟಲ್ ನಲ್ಲಿ 1 ರಿಂದ 10ನೇ ತರಗತಿಯ ಎಲ್ಲಾ ವಿಷಯಗಳನ್ನು ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದಲ್ಲಿ ಸರಿಸುಮಾರು 22,000 ಸಾವಿರಕ್ಕೂ ಹೆಚ್ಚು ಪಠ್ಯ ಪುಸ್ತಕವನ್ನು ಇ-ಕಂಟೆಂಟ್ ಮೂಲಕ ಅಪ್ಲೋಡ್ ಮಾಡಲಾಗಿದೆ. ದೀಕ್ಷಾ ಪೋರ್ಟಲ್‌ನಲ್ಲಿ 1 ರಿಂದ 12ನೇ ತರಗತಿಯ ಪಠ್ಯ ಪುಸ್ತಕದ ಇ-ಕಂಟೆಂಟ್‌ಗಳಿಗೆ QR ತಯಾರಿಸಿ ಎನ್ರ್ಜೈಸ್ (Energize) ಮಾಡಿ ಮಕ್ಕಳ ಕಲಿಕೆಗೆ ಅನುಕೂಲ ಮಾಡಿಕೊಡಲಾಗಿದೆ. ವಿದ್ಯಾರ್ಥಿಗಳಲ್ಲಿ ಲಭ್ಯವಿರುವ ಮೊಬೈಲ್ ಮೂಲಕ ದೀಕ್ಷಾ ಪೋರ್ಟಲ್‌ನ್ನು ಡೌನ್ ಲೋಡ್ ಮಾಡಿ ತಮ್ಮ ತರಗತಿಯ ಎಲ್ಲಾ ವಿಷಯದ ಪಠ್ಯ ಪುಸ್ತಕವನ್ನು ಹಲವಾರು ಬಾರಿ ಓದಲು ಅವಕಾಶ ಕಲ್ಪಿಸಿ ಕೊಡಲಾಗಿದೆ. • ಮಕ್ಕಳಿಗೆ ಓದುವ ಹವ್ಯಾಸವನ್ನು

		ಉತ್ತಮಪಡಿಸಲು ರಾಜ್ಯದ 9008 ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಗ್ರಂಥಾಲಯ ನಿರ್ವಹಣೆಗೆ MHRDಯಿಂದ ಮಾರ್ಗಸೂಚಿಯನ್ನು ಕಳುಹಿಸಲಾಗಿದ್ದು ಕನ್ನಡಕ್ಕೆ ತರ್ಜುಮೆಗೊಳಿಸಿ ಇಲಾಖೆಯಿಂದ ನೀಡಲಾಗಿದೆ. • ಕೋವಿಡ್‌ನಿಂದಾಗಿ ಭೌತಿಕ ತರಗತಿಗಳು ನಡೆಯದೆ ಇದ್ದಾಗ ಶಾಲಾ ವಿದ್ಯಾರ್ಥಿಗಳು ಕಲಿಕಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು 'ವಿದ್ಯಾಗಮ' ಕಾರ್ಯಕ್ರಮ ಅನುಷ್ಠಾನಗೊಳಿಸಲಾಯಿತು. ಈ ಕಾರ್ಯಕ್ರಮದಡಿ ಶಿಕ್ಷಕರು ವಿದ್ಯಾರ್ಥಿಗಳ ನೆರೆಹೊರೆ ತಂಡ ರಚಿಸಿ, ಆ ತಂಡಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಗಳು ನಿರ್ವಹಿಸಬೇಕಾದ ಕಲಿಕಾ ಚಟುವಟಿಕೆಗಳ ಮಾರ್ಗದರ್ಶನ ಮಾಡಿರುತ್ತಾರೆ ಮತ್ತು ಅವರ ಕಲಿಕಾ ಚಟುವಟಿಕೆಗಳ ಮೌಲ್ಯಮಾಪನ ನಿರ್ವಹಿಸಿರುತ್ತಾರೆ. • ದೂರದರ್ಶನ ಚಂದನವಾಹಿನಿಯಲ್ಲಿ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ವೀಡಿಯೋ ಪಾಠಗಳ ಪ್ರಸಾರ ಮಾಡಲಾಗಿದೆ. ಈ ಪಾಠಗಳನ್ನು 'ದೀಕ್ಷಾ' ಪೋರ್ಟಲ್ ಮತ್ತು ಜ್ಞಾನ ದೀಪ ಯೂಟ್ಯೂಬ್ ಚಾನಲ್-ಮಕ್ಕಳವಾಣಿನಲ್ಲಿ ಅಳವಡಿಸಲಾಗಿದೆ. ಇದನ್ನು ಅಪ್ಲೋಡ್ ಮಾಡುವ ಮೂಲಕ ವಿದ್ಯಾರ್ಥಿಗಳು ಪಾಠಗಳನ್ನು ಹಲವಾರು ಬಾರಿ ವೀಕ್ಷಿಸಲು ಅವಕಾಶ ಮಾಡಿಕೊಡಲಾಗಿದೆ. • ಭೌತಿಕ ತರಗತಿಗಳು ಪ್ರಾರಂಭವಾದ ನಂತರ ವಿದ್ಯಾರ್ಥಿಗಳ ಕಲಿಕಾ ಕೊರತೆಯನ್ನು ನಿವಾರಿಸಲು ಪರಿಹಾರ ಬೋಧನೆ ನಿರ್ವಹಿಸಲಾಗಿದೆ. • ಪದವಿ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದಂತೆ ಭಾಷಾ ವಿಷಯದಲ್ಲಿ ಶೇ.30 ರಷ್ಟು ಪಠ್ಯವನ್ನು ಕಡಿತಗೊಳಿಸಿದೆ. • ವಿದ್ಯಾರ್ಥಿಗಳು ತಮಗೆ ಅನುಕೂಲಕರವಾದ ಸಮಯದಲ್ಲಿ ಇಲಾಖೆಯ ಜಾಲತಾಣದಲ್ಲಿ ಹಾಗೂ ಯುಟ್ಯೂಬ್ ಚಾನಲ್ ನಲ್ಲಿ ಹಾಗೂ ದೀಕ್ಷಾ ಪೋರ್ಟಲ್ ನಲ್ಲಿ ಲಭ್ಯವಿರುವ ಪ್ರೀರೆಕಾರ್ಡೆಡ್ ವಿಡಿಯೋ ತರಗತಿಗಳನ್ನು ಬಳಸಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. • ಮಾದರಿ ಪ್ರಶ್ನೆ ಪತ್ರಿಕೆಯನ್ನು ಇಲಾಖೆಯ ಜಾಲತಾಣದಲ್ಲಿ ಅಳವಡಿಸಿದ್ದು ವಿದ್ಯಾರ್ಥಿಗಳಿಗೆ ಲಭ್ಯವಾಗುವ ವ್ಯವಸ್ಥೆಯನ್ನು ಮಾಡಲಾಗಿದೆ.

ಸಂಖ್ಯೆ: ಇಪಿ 08 ಪಿಎಂಎ 2022

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ
ಹಾಗೂ ಸಕಾಲ ಸಚಿವರು